ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಢಾಧಿಕಾರಿಗಳು ಇವರ ನ್ಯಾಯಾಲಯ, ಮೂಡಿಗೆರೆ.

ಸಿ.ಸಿ. ಸಂಖ್ಯೆ.10/2025

| | | | |
|---|---|---|---|
| ಸಾಕ್ಷಿದಾರರ ಹೆಸರು | ಲೋಕೇಶ್ | ಸಿ.ಡಬ್ಲ್ಯೂ: 12 | ಪಿ.ಡಬ್ಲ್ಯೂ: 5 |
| ತಂದೆಯ ಹೆಸರು | ಪುಟ್ಟೇಗೌಡ | | |
| ವಯಸ್ಸು | 55 ವರ್ಷ | | |
| ಉದ್ಯೋಗ | ಎ.ಎಸ್.ಐ, ಗೋಣಿಬೀಡು ಪೊಲೀಸ್ ಠಾಣೆ | | |
| ವಾಸ ಸ್ಥಳ | ಗೋಣಿಬೀಡು | | |

ದಿನಾಂಕ: 21.01.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ.ರವರಿಂದ:**

1. ನಾನು ದಿ: 01.07.2022 ರಿಂದ ಇಂದಿನವರೆಗೂ ಗೋಣಿಬೀಡು ಪೊಲೀಸ್ ಠಾಣೆಯಲ್ಲಿ ಎ.ಎಸ್.ಐ ಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

2. ದಿ: 09.10.2024 ರಂದು ನಾನು ಠಾಣಾ ಹಗಲು ಎಸ್.ಹೆಚ್.ಓ ಆಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ಸಂಜೆ 05.20 ಗಂಟೆ ಸಮಯದಲ್ಲಿ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಎನ್.ಸಿ.ನಂಬರ್ 234/2024 ರಂತೆ ಕಲಂ 324(2) BNS ರೀತ್ಯ ಅಪರಾಧವು ಅಸಂಜ್ಞೆಯ ಅಪರಾಧವಾದ ಕಾರಣ ಸ್ವೀಕೃತಿಯನ್ನು ಮತ್ತು ಹಿಂಬರಹವನ್ನು ನೀಡಿರುತ್ತೇನೆ. ಸ್ವೀಕೃತಿಯನ್ನು ಮತ್ತು ಹಿಂಬರಗಹವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ.5 ಮತ್ತು ನಿ.ಪಿ.6 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.5(ಎ) ಮತ್ತು ನಿ.ಪಿ.6(ಎ) ಎಂದು ಗುರುತಿಸಲಾಯಿತು. ಚಾಸಾ.1 ರವರು ನೀಡಿರುವ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ.ಪಿ.1 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.1(ಬಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲು ಶ್ರೀಮತಿ ಬಿ.ಜಿ.ಎನ್ ವಕೀಲರಿಂದ – ಆರೋಪಿತನ ಪರವಾಗಿ

3. ಚಾಸಾ.1 ರವರು ದಿಃ 09.10.2024 ರಂದು ದೂರನ್ನು ನೀಡಲು ಬಂದಿದ್ದರು. ಚಾಸಾ.1 ರವರು ಠಾಣೆಗೆ ಬಂದಾಗ ಸುಮಾರು 5.20 ರ ಸಮಯ ಆಗಿತ್ತು. ಚಾಸಾ.1 ರವರ ಜೊತೆ ಆ ದಿನ ಬೇರೆ ಯಾರು ಬಂದಿದ್ದರು ಎಂದು ನಾನು ಗಮನಿಸಲಿಲ್ಲ. ಚಾಸಾ.1 ರವರು ನೀಡಿದ ದೂರನ್ನು ನಾನು ಓದಿ ನೋಡಿ ಸ್ವೀಕರಿಸಿದ್ದೆ ಎಂದರೆ ಸರಿ. ದೂರಿನಲ್ಲಿ ಘಟನೆ 08.10.2024 ರಂದು ನಡೆದಿದೆ ಎಂದು ನಮೂದಾಗಿತ್ತು ಎಂದರೆ ಸರಿ. ತಡವಾಗಿ ದೂರನ್ನು ನೀಡಿದ ಬಗ್ಗೆ ಚಾಸಾ.1 ರವರನ್ನು ನಾನು ವಿಚಾರಿಸಲಿಲ್ಲ. ಕಾರಣವನ್ನು ಕೇಳಲು ನನಗೆ ತೊಂದರೆ ಇರಲಿಲ್ಲ. ದೂರನ್ನು ನೀಡಿದ ದಿನವೇ ಸ್ವೀಕೃತಿ ಮತ್ತು ಹಿಂಬರಹವನ್ನು ನಾನು ನೀಡಿರುತ್ತೇನೆ. ಚಾಸಾ.1 ರವರು ಉದ್ದೇಶ ಪೂರ್ವಕವಾಗಿ ದೂರನ್ನು ನೀಡಿ ಎನ್.ಸಿ ಯನ್ನು ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ವಿಚಾರಗಳು ಸತ್ಯಕ್ಕೆ ದೂರವಾಗಿವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇಲ್ಲ

(ತೆರದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)
ಓ.ಹೇ.ಕೇ.ಸ.ಇ.ಎ.ಒ.

ಹಿರಿಯ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.

ಸಾಕ್ಷಿಯ ಸಹಿ

ಮಾ